ದಿನಾಂಕಃ 10.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಕೆ.ಎನ್.ಸಿ., ವಕೀಲರಿಂದ ಆರೋಪಿ ಪರವಾಗಿ-

16. ಬಾಣಾವರದಲ್ಲಿ ವಾಸವಿದ್ದಾಗ ಆರೋಪಿ ಹಾಗೂ ಮೃತಳು ಚೆನ್ನಾಗಿದ್ದರು ಎಂದರೆ ನಿಜ. ಆ ಸಮಯದಲ್ಲಿ ಆರೋಪಿ ಹಾಗೂ ಮೃತಳ ಮಧ್ಯೆ ಕೌಟುಂಬಿಕ ಜಗಳ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಮೃತಳು ಮರಣಹೊಂದಿದ ಸಮಯದಲ್ಲಿ ನಾನು ಬೇಟಿ ನೀಡಿರುವುದಿಲ್ಲ. ಮೃತಳ ಶವಸಂಸ್ಕಾರ ಮಾಡುವ ಸಮಯದಲ್ಲಿ ನಾನು ಹಾಜರಿದ್ದೆ. ಮೃತಳನ್ನು ಆಸ್ಪತ್ರೆಗೆ ಒಯ್ಯುವಾಗ ನಾನು ಹಾಜರಿರಲಿಲ್ಲ.

17. ಆರೋಪಿ ಹಾಗೂ ಮೃತಳಿಗೆ ಒಂದು ಹೆಣ್ಣು ಮಗು ಇದೆ. ಮೃತಳು ಮರಣಹೊಂದಿದ ಒಂದು ತಿಂಗಳ ನಂತರ ಆರೋಪಿ ಆತನ ಹೆಣ್ಣು ಮಗುವನ್ನು ಸುಪರ್ದಿಗೆ ಪಡೆಯಲು ಬಂದಿದ್ದ. ಆರೋಪಿ ಮಗುವನ್ನು ಕೊಡುವಂತೆ ಚಾಸಾ.1 ರವರನ್ನು ಕೇಳಿದ. ಆರೋಪಿಯ ಮಗುವನ್ನು ಆರೋಪಿಗೆ ಹಸ್ತಾಂತರಿಸಲು ನಿರಾಕರಿಸಿ ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

18. ಆರೋಪಿ ಹಾಗೂ ಮೃತಳ ಕೌಟುಂಬಿಕ ಸಮಸ್ಯೆ ಬಗೆ ಹರಿಸುವಲ್ಲಿ ನಾನು ಪಂಚಾಯತಿಯಲ್ಲಿ ಭಾಗವಹಿಸಿದ್ದೇನೆ. ಈ ಬಗ್ಗೆ ನಾನು ಪೋಲೀಸರಲ್ಲಿ ಹೇಳಿಕೆ ನೀಡಿದ್ದೇನೆ. ಆರೋಪಿ ಹಾಗೂ ಮೃತಳ ಕೌಟುಂಬಿಕ ಸಮಸ್ಯೆಗೆ ಸಂಬಂಧಿಸಿದಂತೆ ಯಾವುದೇ ದೂರು ದಾಖಲಾಗಿರುವುದಿಲ್ಲ. ನಾನು ಈ ಕೇಸಿಗೆ ಪೋಲೀಸ್ ಠಾಣೆಗೆ ಬೇಟಿ ನೀಡಿದ್ದೇನೆ. ಠಾಣೆಯಲ್ಲಿ ಪೋಲೀಸರು ನನ್ನ ಸಹಿ ಪಡೆದಿದ್ದಾರೆ. ಠಾಣೆಯಲ್ಲಿ ಎಷ್ಟು ಸಹಿ ಪಡೆದಿದ್ದಾರೆ ಎಂದು ನೆನಪಿಲ್ಲ.ಠಾಣೆಯಲ್ಲಿ ಸಹಿ ಮಾಡಿದ ದಾಖಲೆ ಯಾವುದು ಎಂದು ಹೇಳಲಾಗುವುದಿಲ್ಲ.

19. ಶವ ಹೊರತೆಗೆದಾಗ ಗುರುತು ಸಿಗುವ ಸ್ಥಿತಿಯಲ್ಲಿತ್ತು. ಶವ ಎತ್ತಿದ ಬಗ್ಗೆ ಪೋಲೀಸರಲ್ಲಿ ಹೇಳಿಕೆ ನೀಡಿರುವುದಿಲ್ಲ ಆದರೆ ಶವ ಎತ್ತುವಾಗ ಪೋಲೀಸರು ಸ್ಥಳದಲ್ಲಿದ್ದರು. ಶವ ಎತ್ತುವಾಗ ನಾನು, ಚಾಸಾ.3, ಚಾಸಾ.12 ಹಾಗೂ ಇನ್ನು ಅನೇಕ ಜನ ಇದ್ದರು. ಶವ ಎತ್ತುವ ಸಮಯದಲ್ಲಿ ಪೌರ ಕಾರ್ಮಿಕರು ಹಾಜರಿದ್ದರು. ಅವರ ಹೆಸರು ಗೊತ್ತಿಲ್ಲ.

20. ನನ್ನ ಸಮಕ್ಷಮ ನಿಪಿ.9 ಶವ ಪಂಚನಾಮೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಿಪಿ.9 ರ ದಾಖಲೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ನಿಪಿ.6 ರ ದಾಖಲೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊರತುಪಡಿಸಿ ಬೇರೆ ಯಾವುದೇ ಸಂದರ್ಭದಲ್ಲಿ ನಾನು ಮೃತಳ ಮನೆಗೆ ಬೇಟಿ ನೀಡಿಲ್ಲ. ಆರೋಪಿಗೆ ಮಗುವನ್ನು ನೀಡವುದರಿಂದ ತಪ್ಪಿಸಿಕೊಳ್ಳಲು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದರಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಮಂಜುನಾಥ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ